ಕರ್ನಾಟಕ ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಸಾಗರ ಅರಣ್ಯ ವಿಭಾಗ, ಸಾಗರ – 577401

Office of the Deputy Conservator of Forests, Sagar Forest Division, Sagar– 577401

**Phone No. : 08183 226071** **Email:** : Sagardcf@rediffmail.com

ಕ್ರ: ಬಿ1/ಭೂಮಿ/ಎಫ್.ಸಿ/ಜಿ.ಎಲ್–1190/2019–20 ದಿ:06-01-2020

ಗೆ,

ಕಾರ್ಯ ನಿರ್ವಾಹಕ ಇಂಜಿನಿಯರ್(ವಿ),
ಬೃಹತ್ ಕಾಮಗಾರಿ ಉಪ ವಿಭಾಗ–1,
ಕ.ವಿ.ಪ್ರ.ನಿ.ನಿ, ಬಾಲರಾಜ್ ಅರಸ್ ರಸ್ತೆ,
ರೈಲ್ವೆ ಸ್ಟೇಷನ್ ಹತ್ತಿರ,ಶಿವಮೊಗ್ಗ.

ಮಾನ್ಯರೇ,

ವಿಷಯ:– ಶಿವಮೊಗ್ಗ ಜಿಲ್ಲೆ, ಸೊರಬ ತಾಲ್ಲೂಕು ಕುಪ್ಪಗಡ್ಡೆ ಗ್ರಾಮ ಪಂಚಾಯತ್ ಖಾನೇಷುಮಾರಿ ಸ.ನಂ.316ರಲ್ಲಿ ಕವಿಪ್ರನಿನಿ ಬೃಹತ್ ಕಾಮಗಾರಿ ವಿಭಾಗದಿಂದ 110ಕೆ.ವಿ ಪ್ರಸರಣ ಮಾರ್ಗ ಮತ್ತು 1x10MVA, 110/11 ಕೆ.ವಿ ವಿದ್ಯತ್ ಉಪ ಕೇಂದ್ರವನ್ನು ನಿರ್ಮಾಣ ಮಾಡಲು 110 ಕೆ.ವಿ ಮಾರ್ಗವು ಅರಣ್ಯ ಪ್ರದೇಶದಲ್ಲಿ ಹಾದು ಹೋಗುವ ಪ್ರಸ್ತಾವನೆಗೆ ಸಂಬಂಧಿಸಿದಂತೆ ಆಕ್ಷೇಪಣೆ (EDS) ವ್ಯಕ್ತಪಡಿಸುವ ಬಗ್ಗೆ.

ಉಲ್ಲೇಖ:–

1. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು(ಅರಣ್ಯ ಸಂರಕ್ಷಣೆ) ಮತ್ತು ನೂಡಲ್ ಅಧಿಕಾರಿಗಳು (ಎಫ್.ಸಿ.ಎ) ಇವರ ಕಛೇರಿ ಪತ್ರ ಸಂಖ್ಯೆ :A5(3)/GFL/CR-3/2018-19,e-Office file No: KFD/HOFF/A5-3(GFL)/13/2018-FC Dt:-21.12.2019
2. ತಮ್ಮ ಕಛೇರಿ ಪತ್ರ ಸಂಖ್ಯೆ: ಕಾನಿಇಂ(ವಿ)/ಸಕಾನಿಇಂ(ಕ)ಬೃಕಾವಿ/ಶಿ/2018–19/1018–24 ದಿ:19.06.2018
3. ಈ ಕಛೇರಿ ಪತ್ರ ಸಂಖ್ಯೆ:ಬಿ1/ಭೂಮಿ/ಎಫ್.ಸಿ/ಜಿ/ಎಲ್–1579/2018–19 ದಿನಾಂಕ 23.10.2018.
4. ತಮ್ಮ ಕಛೇರಿ ಪತ್ರ ಸಂಖ್ಯೆ: ಕಾನಿಇಂ(ವಿ)/ಸಕಾನಿಇಂ(ಕ)ಬೃಕಾವಿ/ಶಿ/2019–20/95–100 ದಿ:06.06.2019.
5. ಈ ಕಛೇರಿ ಪತ್ರ ಸಂ ಸಂಖ್ಯೆ:ಬಿ1/ಭೂಮಿ/ಎಫ್.ಸಿ/ಜಿ/ಎಲ್–1190/2019–20 ದಿನಾಂಕ 25.11.2019.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಶಿವಮೊಗ್ಗ ಜಿಲ್ಲೆ ಸೊರಬ ತಾಲ್ಲೂಕು ಕುಪ್ಪಗಡ್ಡೆ ಗ್ರಾಮ ಪಂಚಾಯತ್ ಖಾನೇಷುಮಾರಿ ಸ.ನಂ 316ರಲ್ಲಿ ಕವಿಪ್ರನಿನಿ ಬೃಹತ್ ಕಾಮಗಾರಿ ವಿಭಾಗದಿಂದ 1x10MVA, 110/11 ಕೆ.ವಿ ವಿದ್ಯತ್ ಉಪಕೇಂದ್ರವನ್ನು ನಿರ್ಮಾಣ ಮಾಡಲು 110 ಕೆವಿ ಮಾರ್ಗವು ತೊಗರ್ಸಿ ವಿದ್ಯತ್ ಉಪ ಕೇಂದ್ರದಿಂದ ಜೋಡಣೆಯಾಗಿ ಕಾನಕೊಪ್ಪ, ಚಿಕ್ಕಬ್ಬೂರು, ಗುಡುಗಿನಕೊಪ್ಪ, ಬಿದರಗೆರೆ ಹಾಗೂ ಕುಮ್ರಿ ಗ್ರಾಮಗಳ

ಸರಹದ್ದಿನ ಮುಖಾಂತರ ಹಾದು ಹೋಗಿ ಉದ್ದೇಶಿತ ಕುಪ್ಪಗಡ್ಡೆ 1x10MVA, 110/11 ಕೆ.ವಿ ವಿದ್ಯತ್ ಉಪ ಕೇಂದ್ರಕ್ಕೆ ಸಂಪರ್ಕಿಸಲು ಉದ್ದೇಶಿತ ಪ್ರದೇಶದಲ್ಲಿ ಪ್ರಸ್ತುತ ಕಾಮಗಾರಿಗೆ 11.648 ಕಿ.ಮೀ ಉದ್ದದ ಸಂಪರ್ಕ ಕಲ್ಪಸುವ 110 ಕೆವಿ ಮಾರ್ಗವನ್ನು 22 ಮೀ ಅಗಲ ಅನ್ವಯಿಸುವಂತೆ ಮೆ॥ ಕರ್ನಾಟಕ ಸಮೀಕ್ಷಕರು, ಬೆಂಗಳೂರು ಇವರು ಸರ್ವೇ ಮಾಡಿದ್ದು ಸದರಿಯವರ ವರದಿಯ ಪ್ರಕಾರ ಸ.ನಂ40 ಹಾಗೂ 164ರಲ್ಲಿ ಸುಮಾರು 240.00 ಮೀಟರ್ ನಷ್ಟು ಅರಣ್ಯ ಪ್ರದೇಶದಲ್ಲಿ ಉದ್ದೇಶಿತ ಕೆ.ವಿ ಲೈನ್ ಮಾರ್ಗವು ಹಾದುಹೋಗುತ್ತಿದ್ದು, ಈ ಬಗ್ಗೆ ಅರಣ್ಯ ಇಲಾಖಾ ಅಧಿಕಾರಿಗಳಿಂದ ಸ್ಥಳ ಪರಿಶೀಲನೆ ಮಾಡಿಸಿ ನಿಖರವಾದ ಅರಣ್ಯ ಪ್ರದೇಶದ ವಿವರವನ್ನು ನೀಡಲು ಉಲ್ಲೇಖಿತ (2)ರಲ್ಲಿ ಕಾರ್ಯನಿವಾಹಕ ಇಂಜಿನಿಯರ್ (ವಿ) ಬೃಹತ್ ಕಾಮಗಾರಿ ಉಪ ವಿಭಾಗ-1, ಕವಿಪ್ರ.ನಿ.ನಿ, ಶಿವಮೊಗ್ಗ ಇವರು ಕೋರಿರುತ್ತಾರೆ. ಅದರಂತೆ ಉಲ್ಲೇಖ (3)ರ ಪತ್ರದಲ್ಲಿ ಪ್ರಸ್ತಾಪಿತ ಅರಣ್ಯ ಪ್ರದೇಶದಲ್ಲಿ ಮೇಲ್ಕಂಡ ಕಾಮಗಾರಿಗಳನ್ನು ಕೈಗೊಳ್ಳುವ ಪೂರ್ವದಲ್ಲಿ ಅರಣ್ಯ ಸಂರಕ್ಷಣಾ ಕಾಯ್ದೆ-1980ರ ಪ್ರಕಾರ ಭಾರತ ಸರ್ಕಾರದ ಅನುಮತಿಯನ್ನು ಪಡೆಯಬೇಕಾಗಿರುತ್ತದೆ.

ಅದರಂತೆ ನೀವು ಅರಣ್ಯ ಸಂರಕ್ಷಣಾ ಕಾಯ್ದೆ 1980ರ ಸೆಕ್ಷನ್-2ರ ಪ್ರಕಾರ ಪ್ರಸ್ತಾವನೆಯನ್ನು www.forestclearance.nic.in ಅಂತರ್ಜಾಲದಲ್ಲಿ ಸಲ್ಲಿಸಿದ್ದು, ಪ್ರಸ್ತಾವನೆ ಸಂಖ್ಯೆ:FP/KA/TRANS/38788/2019 ಆಗಿದ್ದು, ಸದರಿ ಪ್ರಸ್ತಾವನೆಯ 07 ಸೆಟ್‌ಗಳನ್ನು ಉಲ್ಲೇಖಿತ (4)ರ ಪತ್ರದಲ್ಲಿ ಸಲ್ಲಿಸುತ್ತಾ, ಉದ್ದೇಶಿತ ಕಾಮಗಾರಿ ಕೈಗೊಳ್ಳಲು 6.073 ಹೆಕ್ಟರ್ ಅರಣ್ಯ ಪ್ರದೇಶವನ್ನು ಬಿಡುಗಡೆ ಮಾಡುವ ಬಗ್ಗೆ ಕೋರಿರುತ್ತೀರಿ.ಅದರಂತೆ ಉಲ್ಲೇಖಿತ (5)ರಲ್ಲಿ ಸದರಿ ಪ್ರಸ್ಥಾವನಗೆ ಸಂಬಂಧಿಸಿದಂತೆ ವಿವರವಾದ ವರದಿಯನ್ನು ಮಾನ್ಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು ಶಿವಮೊಗ್ಗ ವೃತ್ತ ಶಿವಮೊಗ್ಗ ಇವರಿಗೆ ಸಲ್ಲಿಸಲಾಗಿರುತ್ತದೆ. ಹಾಗೂ www.forestclearance.nic.in (ಪರಿವೇಶ್) ಅಂತರ್ಜಾಲದಲ್ಲಿ ಈ ಕೆಳಸಹಿದಾರರ ಲಾಗಿನ್ ನಲ್ಲಿ ಅಪಲೋಡ್ ಮಾಡಲಾಗಿರುತ್ತದೆ. ಉಲ್ಲೇಖಿತ (1)ರ ಪತ್ರದಲ್ಲಿ ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು(ಅರಣ್ಯ ಸಂರಕ್ಷಣೆ) ಮತ್ತು ನೂಡಲ್ ಅಧಿಕಾರಿಗಳು (ಎಫ್.ಸಿ.ಎ) ಇವರು ಸದರಿ ಯೋಜನೆಯ ವಿವರವನ್ನು ಕರ್ನಾಟಕ ಸರ್ಕಾರದ ಮುಂದೆ ಮಂಡಿಸುವ ಮೊದಲು ಒಮ್ಮೆ ಪರಿಶೀಲಿಸಿ ನೋಡಲಾಗಿ ಈ ಕೆಳಗಿನ ನ್ಯೂನತೆಗಳನ್ನು ಗಮನಿಸಿ ಈ ಕಛೇರಿಯ ಗಮನಕ್ಕೆ ತಂದು ತಾವು ಸಲ್ಲಿಸಿದ ಬುಕ್‌ಲೆಟ್ ಗಳಲ್ಲಿ ಪರಿಹರಾತ್ಮಕ ನೆಡುತೋಪು ಬೆಳಸುವ ವಿಷಯಕ್ಕೆ ಸಂಬಂಧಿಸಿದಂತೆ ಈ ಕೆಳಗಿನ ಅಂಶಗಳ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಹಾಗೂ ಆನ್‌ಲೈನ್ ನಲ್ಲಿ ಅಪಲೋಡ್ ಮಾಡಿರುವುದಿಲ್ಲವೆಂದು ಸದರಿ ವಿಷಯಕ್ಕೆ ಸಂಭದಿಸಿದಂತೆ ತುರ್ತಾಗಿ ಇ.ಡಿ.ಎಸ್ ನ್ನು ಪ್ರಶ್ನಿಸಬೇಕೆಂದು ಆದೇಶಿಸಿರುತ್ತಾರೆ. ಅದರಂತೆ ಈ ಕೆಳಗಿನ ಅಂಶಗಳಿಗೆ ಸಂಬಂಧಿಸಂತೆ ಆಕ್ಷೇಪಣೆ (EDS) ವ್ಯಕ್ತಪಡಿಸುತ್ತಾ, ಸದರಿ ಮಾಹಿತಿಯನ್ನು 08 ಸೆಟ್‌ಗಳಲ್ಲಿ ಹಾಗೂ ಸಾಪ್ಟ ಕಾಫಿಯನ್ನು ಸಿ.ಡಿ ಮುಖೇನ ತುರ್ತಾಗಿ ಸಲ್ಲಿಸಲು ತಿಳಿಸಿದೆ.

1. ಪರಿಹಾರಾತ್ಮಕ ನೆಡುತೋಪಿನ ಬಗ್ಗೆ ಯಾವುದೇ ಮಾಹಿತಿ ಒದಗಿಸಿರುವುದಿಲ್ಲ ಆದ್ದರಿಂದ ಅವುಗಳ ಬಗ್ಗೆ ಮಾಹಿತಿ ಒದಗಿಸುವುದು.
2. ಸದರಿ ಯೋಜನೆಗೆ ಬಿಡುಗಡೆಗೊಳ್ಳುವ 6.073 ಹೆಕ್ಟರ್ ಅರಣ್ಯ ಪ್ರದೇಶದ ಬದಲಾಗಿ ಎರಡು ಪಟ್ಟು ಅರಣ್ಯೇತರ ಪ್ರದೇಶ ಅಂದರೆ 12.146 ಹೆಕ್ಟರ್ ಅರಣ್ಯೇತರ ಪ್ರದೇಶದಲ್ಲಿ ಪರಿಹಾರಾತ್ಮಕ ನೆಡುತೋಪು ಬೆಳೆಸಬೇಕಿದ್ದು, ಸದರಿ ಪ್ರದೇಶದ ಬಗ್ಗೆ ಉಪಯೋಗಿ ಸಂಸ್ಥೆಯು ದಾಖಲೆ ನೀಡಬೇಕಿರುತ್ತದೆ. ಆದರೆ ಈ ವಿಚಾರವಾಗಿ ಉಪಯೋಗಿ ಸಂಸ್ಥೆಯಾದ ತಾವು ಯಾವುದೇ ಪ್ರಸ್ತಾವನೆಯನ್ನು ಉಲ್ಲೇಖ(4)ರ ಪತ್ರದಲ್ಲಿ ಸಲ್ಲಿಸಿದ ಬುಕಲೆಟ್‌ನಲ್ಲಿ ಸಲ್ಲಿಸಿರುವುದಿಲ್ಲ. (para 2.5(i)(a) of the latest FC guidelines)ರಂತೆ. ಆದ್ದರಿಂದ ಅವುಗಳ ಬಗ್ಗೆ ಮಾಹಿತಿ ಒದಗಿಸುವುದು.

3. ಸದರಿ ಪರಿಹರಾತ್ಮಕ ನೆಡುತೋಪು ಬೆಳೆಸುವ ಅರಣ್ಯೇತರ ಪ್ರದೇಶವನ್ನು 1cm=79.2m ಅಳತೆಯ ಗ್ರಾಮ ನಕಾಶೆಯಲ್ಲಿ ಜಿಯೋ–ರೆಫರೆನ್ಸ್ ಮಾಡಿ ಗಡಿ ಗುರುತಿಸಿ, ಆ ನಕಾಶೆಯಲ್ಲಿ ಎಲ್ಲಾ ಮೂಲೆಗಳ ಜಿ.ಪಿ.ಎಸ್ ಪಾಯಿಂಟ್ಸ್ (WGS-84/hddd.dddd) ಗಳನ್ನು ನಮೂದಿಸಿ ಸಲ್ಲಿಸುವುದು.
4. ಸದರಿ ಪರಿಹರಾತ್ಮಕ ನೆಡುತೋಪು ಬೆಳೆಸುವ ಅರಣ್ಯೇತರ ಪ್ರದೇಶವನ್ನು 1=50.000 ಅಳತೆಯ ಟೋಪೋ ನಕಾಶೆಯಲ್ಲಿ ಗುರುತಿಸಿ, ಆ ನಕಾಶೆಯಲ್ಲಿ ಜಿ.ಪಿ.ಎಸ್ (WGS-84/hddd.dddd) ಪಾಯಿಂಟ್ಸ್‌ಗಳನ್ನು ನಮೂದಿಸಿ ಸಲ್ಲಿಸುವುದು.
5. ಸದರಿ ಪರಿಹರಾತ್ಮಕ ನೆಡುತೋಪು ಬೆಳೆಸುವ ಅರಣ್ಯೇತರ ಪ್ರದೇಶದ ಜಿ.ಪಿ.ಎಸ್ ಪಾಯಿಂಟ್ಸ್‌ಗಳನ್ನು ಪಡೆದು ಅದನ್ನು ಕೆ.ಎಂ.ಎಲ್ ತಂತ್ರಾಂಶದಲ್ಲಿ ತಯಾರಿಸಿ ಸಾಪ್ಟ ಕಾಫಿಯನ್ನು ಸಲ್ಲಿಸುವುದು. ಮತ್ತು ಗೂಗಲ್ ಅರ್ಥ ತಂತ್ರಾಂಶದಲ್ಲಿ ನಕಾಶೆ ತಯಾರಿಸಿ ಹಾರ್ಡ ಕಾಫಿಯನ್ನು ಸಲ್ಲಿಸುವುದು.
6. ಸದರಿ ಅರಣ್ಯೇತರ ಪ್ರದೇಶವು ಪರಿಹರಾತ್ಮಕ ನೆಡುತೋಪು ಬೆಳೆಸಲು ಯೋಗ್ಯವಾಗಿರುವ CA Suitability Certificateನ್ನು ಒದಗಿಸುವುದು.(Copy of the Competent authority regarding suitability of area identified for compensatory afforestation and form management point view).
7. ಸದರಿ ಪರಿಹರಾತ್ಮಕ ನೆಡುತೋಪು ಬೆಳೆಸುವ ಅರಣ್ಯೇತರ ಪ್ರದೇಶಗಳು ಒಂದೇ ಕಡೆ ಇಲ್ಲದೆ ಇದ್ದ ಪಕ್ಷದಲ್ಲಿ ಅವುಗಳು ಪ್ಯಾಚ್ ಗಳಾಗಿದ್ದರೆ. ಅವುಗಳಿಗೆ ಮೇಲ್ಕಾಣಿಸಿದ ಕ್ರಮ ಸಂಖ್ಯೆ 3 ರಿಂದ 6ರ ಅಂಶದಂತೆ ಪ್ರತ್ಯೇಕ ವಾಗಿ ಸಂಪೂರ್ಣ ಮಾಹಿತಿಯನ್ನು ತಯಾರಿಸುವುದು.
8. ಸದರಿ ಪರಿಹರಾತ್ಮಕ ನೆಡುತೋಪು ಬೆಳೆಸುವ ಅರಣ್ಯೇತರ ಪ್ರದೇಶದ ಸ್ಥಳದ ಬಗ್ಗೆ ಮಾಹಿತಿಯನ್ನು ಈ ಕೆಳಕಂಡಂತೆ ಒದಗಿಸುವುದು.

| Sl No. | No of patches | Division | Patch No | Name of PF/RF/Others | Taluk | Hobli | Village Name | Compartment No/Any identification No | Area (ha) | Range | Sy No | GPS Reading of Patches (WGS-84/hddd.dddd | KML File of patches | Remarks |
|---|---|---|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 | 13 | 14 | 15 |

ಮೇಲ್ಕಂಡ ಅಂಶಗಳ ಮಾಹಿತಿಯನ್ನು ತಯಾರಿಸಿ (ಕೆ.ಎಂ.ಎಲ್ ಫೈಲ್‌ನ್ನು ಒಳಗೊಂಡಂತೆ) ಅವುಗಳನ್ನು ಸ್ಕ್ಯಾನ್ ಮಾಡಿ ಸಾಪ್ಟ ಕಾಫಿಯಲ್ಲಿ ಮತ್ತು ಹಾರ್ಡ ಕಾಫಿಯಲ್ಲಿ ಇಂಕ್ ಸೈನ್ ಮಾಡಿ ತುರ್ತಾಗಿ ಸಲ್ಲಿಸುವುದು.

ತಮ್ಮ ವಿಶ್ವಾಸಿ

ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ